**◆ ಗ್ರಂಥ ಸಂಪಾದನೆ ನಿಮ್ಮ ಕರ್ಮಭೂಮಿ. ಅದರಲ್ಲಿ ನೀವು ಎದುರಿಸಿದ ಬಿಕ್ಕಟ್ಟುಗಳನ್ನು ಪರಿಹರಿಸಿಕೊಂಡು ಕೃತಿ ಸಂಪಾದನೆ ಮುಂದುವರಿಸಿದ ಆನಂದದ ಕ್ಷಣಗಳನ್ನು, ಆ ಸಮಸ್ಯೆಗಳ ಸ್ವರೂಪವನ್ನು ವಿವರಿಸಬಹುದೆ?**

ಹೌದು, ಗ್ರಂಥ ಸಂಪಾದನೆ ನನ್ನ ಕರ್ಮಭೂಮಿ. ಯಾವುದೇ ಕೃತಿಯನ್ನು ಕೈಗೆತ್ತಿಕೊಂಡಾಗಲೂ ಅಲ್ಲಿ ಬಿಕ್ಕಟ್ಟುಗಳಿರುತ್ತವೆ. ಕೆಲವಂತೂ ಬಹಳ ಕಠಿಣವಾಗಿರುತ್ತವೆ. ನಡುಗನ್ನಡ ಕಾಲದಲ್ಲಿ ಬಾಹುಬಲಿ ಕುರಿತಂತೆ ವಿಪುಲವಾದ ಸಾಹಿತ್ಯ ರಚನೆಯಾಗಿದೆ. ಟಿ.ವಿ. ವೆಂಕಟಾಚಲಶಾಸ್ತ್ರಿಗಳ 'ಕವಿಗಳು ಕಂಡ ಗೊಮ್ಮಟ'ದಲ್ಲಿ ಇದನ್ನು ಗಮನಿಸಬಹುದು. ಅಲ್ಲಿ ಪಂಚಬಾಣ ಕವಿಯ 'ಭುಜಬಲಿಚರಿತೆ' ಮಾತ್ರ ಪ್ರಕಟವಾಗಿರಲಿಲ್ಲ. ಹಾಗಾಗಿ ಇದನ್ನು ನಾನು ಕೈಗೆತ್ತಿಕೊಂಡೆ. ಒಳಹೊಕ್ಕು ನೋಡಿದಾಗ ಹಸ್ತಪ್ರತಿ ಆರಂಭವೇ ಬೇರೆ ಇದೆ. ಗರಿಗಳ ಮೇಲೆ ಬೂಸ್ಟು ಹಿಡಿದು ಅಕ್ಷರಗಳ ಅರ್ಧಭಾಗ ಮಾತ್ರ ಕಾಣಿಸುತ್ತದೆ. ಆಗ ಅಂತ್ಯದಿಂದ ಹಸ್ತಪ್ರತಿ ಓದುತ್ತಾ ಬಂದು ಆರಂಭದ ಪದ್ಯಗಳು ರಾಮವಿಜಯಕಾವ್ಯ ಎಂದು ತಿಳಿಯಿತು. ಇನ್ನು 'ಭುಜಬಲಿಚರಿತೆ'ಯ ಪಠ್ಯ ಕಟ್ಟಲು ಮತ್ತೊಂದು ಅಸಮಗ್ರ ಪ್ರತಿಯನ್ನು ಬಳಸಿಕೊಂಡು ಬಹುಪಾಲು ಕೃತಿಯನ್ನು ಪೂರ್ಣಗೊಳಿಸಿದೆ. ಬೂಸ್ಟು ಹತ್ತಿದ ತಾಳೆಗರಿಗಳನ್ನು ಓದಲು ಭೂತಗನ್ನಡಿ ಬಳಸಬೇಕಾಯಿತು. ಇಷ್ಟಾದರೂ ಶಬ್ದರೂಪಗಳು ಗೋಚರಿಸುತ್ತಿರಲಿಲ್ಲ. ಕಾವ್ಯ ಪೂರ್ಣಗೊಳಿಸಿದ ಮೇಲೆ ಕನ್ನಡಕ ಬದಲಿಸಬೇಕಾಯಿತು. ಪುಸ್ತಕ ಪ್ರಕಟವಾದಾಗ ಪಠ್ಯವನ್ನು ಈ ಪ್ರಮಾಣದಲ್ಲಾದರೂ ಕಟ್ಟಿ ಕೊಟ್ಟೆನಲ್ಲ ಎಂದು ಸಂತೋಷವಾಯಿತು.

**◆ ನಿಮ್ಮ 'ಸಹ್ಯಾದ್ರಿ ಖಂಡ' ಸಹ್ಯಾದ್ರಿ ಪರ್ವತ ಶ್ರೇಣಿಯ ತೀರ್ಥಕ್ಷೇತ್ರಗಳನ್ನು ಅದಕ್ಕಿರುವ ಧಾರ್ಮಿಕ, ಸಾಮಾಜಿಕ ನೆಲೆಗಳನ್ನು ಒಳಗೊಳ್ಳುವ ಕಾವ್ಯ. ಅದರ ಬಗ್ಗೆ ಹೇಳಿ.**

